ಇ) ಈ ಬಗ್ಗೆ ಹೆಚ್ಚುವರಿ ಶಿಕ್ಷಕರಿರುವ ಶಾಲೆಗಳಿಂದ ತಾತ್ಕಾಲಿಕವಾಗಿ ನಿಯೋಜನೆ ಮಾಡಲಾಗಿದೆ.

ವಿದ್ಯುತ್ ಸರಬರಾಜಿನ ಬಗ್ಗೆ

2760 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರಕ್ಕೆ ಪೂರೈಕೆಯಾಗುವ ವಿದ್ಯುತ್ತಿನ ದಿನವಹಿ ಪ್ರಮಾಣವೆಷ್ಟು?*

ಆ) *ಈ ವಿದ್ಯುತ್‌ನಲ್ಲಿ ಸಾಮಾನ್ಯ ಗ್ರಾಹಕರು ಸಣ್ಣ ಕೈಗಾರಿಕೆ, ಬೃಹತ್ ಕೈಗಾರಿಕೆ ಬೀದಿ ದೀಪಗಳು ಇವುಗಳಿಗಾಗಿ ಖರ್ಚು ಮಾಡುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು?*

ಇ) *ಹೈಟೆನ್‌ಷನ್ ಬಳಕೆದಾರರಿಂದ ಬರಬೇಕಾದ ಬಾಕಿಯ ಮೊತ್ತವೆಷ್ಟು? (ರೂ.50,000) ಅಧಿಕ ಬಾಕಿ ಉಳಿಸಿಕೊಂಡ ಉದ್ಯಮಗಳು, ಸಂಸ್ಥೆಗಳ ಹೆಸರುಗಳ ವಿವರಗಳನ್ನೊದಗಿಸುವುದು.*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಬೆಂಗಳೂರು ನಗರಕ್ಕೆ ದಿನವಹಿ ಸರಾಸರಿ 7 ದಶಲಕ್ಷ ಯೂನಿಟ್ಸು ವಿದ್ಯುಚ್ಛಕ್ತಿ ಈಗ ಪೂರೈಕೆಯಾಗುತ್ತಿದೆ.

ಆ) ವಿವರಗಳು ಕೆಳಕಂಡಂತಿವೆ

ಗ್ರಾಹಕರ ವಿವರಗಳು	ವಿದ್ಯುತ್ ಬಳಕೆಯ ಪ್ರಮಾಣ (ದಶಲಕ್ಷ ಯೂನಿಟ್‌ಗಳಲ್ಲಿ)
ಗೃಹದೀಪ, ಸರ್ವವಿದ್ಯುತ್ ಗೃಹ ಮತ್ತು ವಾಣಿಜ್ಯ ದೀಪಗಳು	3.2
ಸಣ್ಣ ಕೈಗಾರಿಕೆ	1.2
ಬೃಹತ್ ಕೈಗಾರಿಕೆ	2.5
ಬೀದಿ ದೀಪಗಳು	0.1

ಇ) ಈ ವಿವರಗಳನ್ನು ಸಂಗ್ರಹಿಸಲಾಗುತ್ತಿದ್ದು ನಂತರ ಒದಗಿಸಲಾಗುವುದು.

ಅಡ್ವೋಕೇಟ್ ಜನರಲ್ ಕಛೇರಿಯ ಖರ್ಚು ಕುರಿತು

2757- ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1-10-90 ರಿಂದ 10-8-91ರ ವರೆಗೆ ರಾಜ್ಯದ 'ಅಡ್ವೋಕೇಟ್ ಜನರಲ್' ಕಛೇರಿಯ ಸಿಬ್ಬಂದಿ ವಾಹನ ನಿರ್ವಹಣೆ ಪ್ರವಾಸ ಭತ್ಯೆಗಳಿಗಾಗಿ ಖರ್ಚು ಮಾಡಿದ ಹಣವೆಷ್ಟು*

ಆ) *ಮೇಲ್ಕಂಡ ವೆಚ್ಚವು ರಾಜ್ಯದ ಆಕೌಂಟೆಂಟ್ ಜನರಲ್‌ರವರ ಪರಿಶೀಲನೆಯ ವ್ಯಾಪ್ತಿಗೆ ಬರುವುದೇ?*

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :